ಪ್ರಕಟಣೆಯಾಗಿಲ್ಲ... ಸುಮ್ಮನೆ ಟೀವೀ ಮೀಡಿಯಾ ಅಂತ ಗುಲ್ಲಾಗಿಬಿಡುತ್ತೆ... ಇವೊತ್ತೇ ಸಂಸ್ಕಾರ ಆಗಬೇಕು...' ತರಾತುರಿಯಲ್ಲಿ ಹೇಳಿದನು. 'ನಿಮ್ಮ ಕೆಲಸ ಆದ ಕೂಡಲೇ ಅನೌನ್ಸ್ ಮಾಡಿಸುತೀವಿ... ಅಂತಿಮದರ್ಶನಕ್ಕೆ ಸಹ ಅಣಿಯಾಗಬೇಕು...'

'ಸಾವುಂಟಾಗಿದ್ದು ಯಾವಾಗ?'

'ಬೆಳಿಗ್ಗೆ ನಾಕು–ನಾಕೂವರೆಯಿರಬಹುದು... ಜಗನ್ನಾಥಪುರಿಗೆ ಹೋಗುವ ಪ್ಲ್ಯಾನ್ ಇತ್ತು. ಹಾಗಾಗಿ ಬೇಗ ಎದ್ದಿದ್ದೆವು... ಏನೋ ಆಗಿಹೋಯಿತು...' ಅಂತಂದ ಮಹಾಶಯ, 'ಇನ್ನೂ ಒಂದೇನಂದರೆ...' ಎಂದು ಮುಂದುವರೆಸಿದ್ದನ್ನು ಥಟಕ್ಕನೆ ತಡೆದು ಮೌನವಾದನು. ಮಾತು ಕಟ್ಟಿತೋ ಏನೋ.

'ಮಾತೇಕೆ ನುಂಗುತೀಯಾ, ಹಿಮಾದ್ರಿ? ಹೇಳಿಬಿಡು...' ಎಂದು ಬದಿಗಿದ್ದ ಸ್ವಲ್ಪ ಹೆಚ್ಚು ವಯಸ್ಸಿನ ಗಂಡಸು ಹೇಳುವಾಗ, ಹಿಮಾದ್ರಿ ಸತ್ಪತಿಗೆ ದುಃಖ ಒತ್ತರಿಸಿ ಬಂತು. 'ಸರಿ ಬಿಡು... ನಾನೇ ಹೇಳುತೀನಿ...' ಅನ್ನುತ್ತ ಆತನೇ ಮಾತಿಗೆ ತೊಡಗಿದ. 'ಕೋವಲನ್‌ರವರೇ... ನಾನು ಹೇಮಾದ್ರಿ... ಹೇಮಾದ್ರಿ ಸತ್ಪತಿ. ಇವನಿಗೆ ಅಣ್ಣನಾಗಬೇಕು...' ಎಂದು ಹೇಳುವ ಹೊತ್ತಿಗೆ, ಇಬ್ಬರ ಮೈಮೋರೆ ತೋರಿದ ಹೋಲಿಕೆಯಿಂದಾಗಿ ಸಹಜವಾಗಿಯೇ ಸಹೋದರರೆಂದು ಅನ್ನಿಸಿಬಂತು. 'ಏನಿಲ್ಲ... ಕಾಶ್ಯಪಿ ನಿಮ್ಮ ಕುರಿತು ಆಗಾಗ ಹೇಳುತಿದ್ದಳು. ಸತ್ತರೆ ನಿಮ್ಮ ಮೂಲಕವೇ ಸಂಸ್ಕಾರವಾಗಬೇಕು ಅನ್ನೋ ಆಸೆ ಇತ್ತು ಅವಳಿಗೆ...'

ಈ ವಿಷಯ ಗೊತ್ತಿತ್ತಾದ್ದರಿಂದ ಆ ಕುರಿತು ಬೆಳೆಸದೆ, 'ಹಿಮಾದ್ರಿಜೀ... ನೀವು ನಿಮ್ಮನ್ನು ನೀವು ಸಂಬಳಿಸಿಕೋತೀರಿ ಅಂದುಕೊಂಡಿದೀನಿ... ಲೆಟ್ಸ್ ಪ್ಲಾನ್ ದಿ ಹೋಲ್ ಇವೆಂಟ್ ನವ್...' ಎಂದು ಹೇಳಿ ವ್ಯವಹಾರಕ್ಕಿಳಿದೆ.

ನಾನು, ಹಿಮಾದ್ರಿ ಮತ್ತು ಆತನ ಅಣ್ಣ ಹೇಮಾದ್ರಿ ಮೂವರೇ ಆ ಐಷಾರಾಮಿ ಆಸ್ಪತ್ರೆಯಲ್ಲೊಂದು ಸ್ಪೆಷಲ್ ವಾರ್ಡ್ ಹೊಕ್ಕು ಕುಳಿತೆವು. ಹಾಸ್ಪಿಟಲಿನ ಡೀನ್ ಸಹ ಕ್ಷಣಕಾಲ ಅಲ್ಲಿ ಬಂದು ಹೊರಟರು.

'ನಿಮಗೀಗ ಎಷ್ಟು ಸಮಯಬೇಕು ಹೇಳಿ...' ಹೇಮಾದ್ರಿ ಕೇಳಿದ.

'ಅಬೌಟ್ ಎನ್ ಅವರ್ ಆರ್ ಸೋ... ಶರೀರ ಸ್ಟಿಫ್ ಆಗಿಲ್ಲದಿದ್ದರೆ ಕೆಲಸ ಸುಲಭ...'

'ರೈಟ್... ಹಾಗಾದರೆ ಇನ್ನು ಒನ್ನವರ್ ಆದಮೇಲೆ ಲೆಟ್ಸ್ ಕಾಲ್ ದಿ ಮೀಡಿಯಾ... ಅಂಡ್ ಲೆಟ್ ದಿ ಡೀನ್ ಮೇಕ್ ದಿ ಅನೌನ್ಸ್‌ಮೆಂಟ್...'

ಹದಿನೈದು ಮಿನಿಟುಗಳ ಸಮಕ್ಷಮದ ನಡುವೆ ಹೀಗೊಂದು ಒಡಂಬಡಿಕೆ ಮುಗಿಸುವ ಹೊತ್ತಿಗೆ, 'ಹ್ಞಾಂ ಮಿಸೆಸ್ ಸತ್ಪತಿಯವರ ಒಂದೆರಡು ಫೋಟೊ ಇದ್ದರೆ ಬೇಕಲ್ಲ? ಆಕೆಗೆ ಇಷ್ಟವಾದ ಅಲಂಕಾರ ಇರೋ ಅಂಥದ್ದು... ಇಟ್ ವಿಲ್ ಬಿ ಆಫ್ ಹೆಲ್ಪ್...' ಎಂದು ಕೇಳಿದೆ. ಮೃತಳನ್ನು ನಾನು ಈ ಮೊದಲು ಕಂಡಿದ್ದಿರದ ಕಾರಣ ಈ ವ್ಯವಸ್ಥೆ. ಕೊನೆಗಳಿಗೆಯಲ್ಲಿನ ಟಚಪ್ ಮಾಡಲಿಕ್ಕೆ, ಚಹರೆಯ ಮೊಹರು ತಿದ್ದಲಿಕ್ಕೆ ಫೋಟೊಗಳು ಅನುಕೂಲವಾಗುತ್ತವೆ. ಹಾಗಾಗಿ ಕೇಳಿದೆ.

'ಮೇಲ್ ಮಾಡಿಸಲಾ? ಕುಣಾಲನಿಗೆ ಹೇಳುತೀನಿ...' ಹಿಮಾದ್ರಿ ಸತ್ಪತಿ ಉತ್ತರಿಸಿದ.

'ನಮ್ಮ ಹುಡುಗ ಈಗಾಗಲೇ ಕುಣಾಲನ ಜೊತೆ ಮಾತಾಡಿದ್ದಾನೆ... ಯಾತಕ್ಕೂ ವಿಷಯ ನಿಮಗೆ ತಿಳಿದಿರಲಿ ಅಂತ ಹೇಳಿದೆ ಅಷ್ಟೆ.'

ಈ ಮಾತಿಗೆ ಹಿಮಾದ್ರಿ ಸತ್ಪತಿ ಸರಿ ಅಂತೆಂಬಂತೆ ತಲೆದೂಗಿದ. 'ನನಗೊಬ್ಬಳು ಪುಟ್ಟ ವರ್ಷದ ಮಗಳಿದ್ದಾಳೆ, ಸರ್... ಆರು ವರ್ಷದ ಹುಡುಗಿ. ಅವಳಿಗಿನ್ನೂ ವಿಷಯ ತಿಳಿಸಿಲ್ಲ. ಯಾರಿಗೂ ಆಘಾತವೆನಿಸದ ಹಾಗೆ ನನ್ನ ಹೆಂಡತಿಯನ್ನು ರೆಡಿ ಮಾಡುತೀರಲ್ಲವಾ? ಸುಮ್ಮನೆ ಮಲಗಿದಾಳೇನೋ ಅನ್ನಿಸಬೇಕು... ಅಷ್ಟು ಪ್ರಶಾಂತವಾಗಿರಲಿ...' ಎಂಬ ಅರಿಕೆಯಿಟ್ಟ.